ನೀನೇ ಈ ವಿಸ್ತಾರವಾದ ರಾಜ್ಯಕ್ಕೆ ಮಹಾಪ್ರಭುವಾಗುತ್ತೀಯೆ" ಎಂದು ಕೂಗಿ ಹೇಳಿದನು. ಇಂದುಮತಿಯನ್ನು ಉದ್ದೇಶಿಸಿ, "ಆ ಮಾಲೆಯನ್ನು ಆತನಿಗೇ ತೊಡಿಸು ಮಗಳೇ" ಎಂಬುದಾಗಿಯೂ ಆದೇಶಿಸಿದನು. ಆಸೆತುಂಬಿದ ಕಣ್ಣುಗಳಿಂದ ಇಂದುಮತಿಯು ಆ ಮಾಲೆಯನ್ನು ಪುನಃ ಆ ಪ್ರಿಯತಮನಿಗೆ ತೊಡಿಸಿದಳು. ಈ ಬಾರಿಯಂತೂ ಆ ಯುವಸನ್ಯಾಸಿಯು ಕೋಪದಿಂದ, "ಇದೇನು ಹುಚ್ಚುತನ ! ನಾನೆಲ್ಲಿ, ಈ ರಾಜಕುಮಾರಿಯೆಲ್ಲಿ, ನಾನು ಮದುವೆಯಾಗುವವನಲ್ಲ, ಸಂನ್ಯಾಸವೇ ನನ್ನ ಜೀವನ ಮಾರ್ಗ" ಎಂದು ಹೇಳಿ ಆ ಪುಷ್ಪಮಾಲಿಕೆಯನ್ನು ಕಿತ್ತು ಈಡಾಡಿ, ಆ ಸ್ವಯಂವರಮಂಟಪವನ್ನು ತೊರೆದು ಭರಭರನೆ ಎತ್ತಲೋ ಹೊರಟುಹೋದನು. ಆ ಸಭೆಯಲ್ಲಿದ್ದವರೆಲ್ಲ ಪ್ರತಿಮೆಗಳಂತಾಗಿ ಆ ದೃಶ್ಯವನ್ನೇ ನೆಟ್ಟ ಕಂಗಳಿಂದ ನೋಡುತ್ತಿದ್ದರು.

ರಾಜಕುಮಾರಿಯಾದರೋ ಆ ಕ್ಷಣದಲ್ಲಿ ಆ ಪುರುಷೋತ್ತಮನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡುಬಿಟ್ಟಿದ್ದಳು. "ಅವನನ್ನೇ ನಾನು ವಿವಾಹವಾಗಬೇಕು, ಅವನಿಲ್ಲದೆ ನಾನು ಬದುಕಲಾರೆ, ಅವನು ನನ್ನನ್ನು ನಿರಾಕರಿಸಿದರೆ ನಾನು ಪ್ರಾಣತ್ಯಾಗ ಮಾಡುತ್ತೇನೆ, ಅವನ ಮನವೊಲಿಸಿ ಹಿಂದಕ್ಕೆ ಕರೆತರುತ್ತೇನೆ" ಎಂದು ನಿಂತಪಟ್ಟಿಯಲ್ಲಿಯೇ ತಾನೂ ಸ್ವಯಂವರಮಂಟಪದಿಂದ ಹೊರನಡೆದಳು. ಆ ಹೊತ್ತಿನಲ್ಲಿ ಸತ್ಯಾನಂದನು ಚಂದ್ರವರ್ಮನನ್ನು ಕುರಿತು, "ಮಹಾರಾಜ, ಮುಂದೇನಾಗುತ್ತದೋ ನೋಡೋಣ. ನಾವು ಆ ರಾಜಕುಮಾರಿಯನ್ನು ಗುಟ್ಟಾಗಿ ಹಿಂಬಾಲಿಸೋಣ" ಎಂದು ಸೂಚಿಸಿದನು. ರಾಜನು, "ತಥಾಸ್ತು" ಎಂದನು. ಸಂನ್ಯಾಸಿಯ ಹಿಂದೆ ರಾಜಕುಮಾರಿ, ರಾಜಕುಮಾರಿಯ ಹಿಂದೆ ಸತ್ಯಾನಂದ, ಸತ್ಯಾನಂದನ ಹಿಂದೆ ಚಂದ್ರವರ್ಮ ಎಂಬಂತೆ ಆ ಪ್ರಯಾಣ ಪ್ರಾರಂಭವಾಯಿತು. ಅದೆಷ್ಟೋ ಮೈಲಿಗಳು ನಡೆದುಹೋಗುವ ವೇಳೆಗೆ ಗೊಂಡಾರಣ್ಯವೊಂದು ಎದುರಾಯಿತು. ಆ ಅರಣ್ಯದಲ್ಲಿ ಸಂಚರಿಸಿದವನಾಗಿದ್ದ ಆ ಯುವ ಸಂನ್ಯಾಸಿಯು ಅದರ ಸೀಳುದಾರಿಗಳನ್ನೆಲ್ಲ ಚೆನ್ನಾಗಿ ಅರಿತವನಾಗಿದ್ದನು. ಬೇರೆ ದಾರಿಕಾಣದೆ ರಾಜಕುಮಾರಿಯು ಆ ಕಾಡು ದಾರಿಗೆ ಬಿದ್ದು ಅವನ ಬೆನ್ನುಹತ್ತಿದಳು. ಆದರೆ ಸಂನ್ಯಾಸಿಯು ಅತ್ಯಂತ ಸುಲಭವಾಗಿ ರಾಜಕುಮಾರಿಯನ್ನು ದಾರಿತಪ್ಪಿಸಿ, ತಾನು ಎತ್ತಲೋ ಮಾಯವಾಗಿಬಿಟ್ಟನು.

ಅಷ್ಟು ಹೊತ್ತಿಗಾಗಲೇ ಕತ್ತಲೆ ಆವರಿಸತೊಡಗಿತ್ತು. ಇಂದುಮತಿಗೆ ಮುಂದಕ್ಕೆ ದಾರಿ ದುರ್ಗಮವಾಯಿತು. ಹಸಿವಿನಿಂದಲೂ ಆಯಾಸದಿಂದಲೂ ನಿರಾಸೆಯಿಂದಲೂ ಯಾವುದೋ ಒಂದು ಮರದ ಬುಡದಲ್ಲಿ ಕುಸಿದು ಕುಳಿತುಬಿಟ್ಟಳು. "ಅಯ್ಯೋ, ಈ ಗೊಂಡಾರಣ್ಯದಲ್ಲಿ ನನಗಾರು ಗತಿ?" ಎಂದು ರೋದಿಸತೊಡಗಿದಳು. ಆಕೆಯನ್ನು ಹಿಂಬಾಲಿಸಿ ಬಂದಿದ್ದ ಸತ್ಯಾನಂದನೂ ಚಂದ್ರವರ್ಮನೂ ಅಲ್ಲಿ ಕಾಣಿಸಿಕೊಂಡು ಧೈರ್ಯತುಂಬಿದರು. "ನಿನಗೆ ಆ ಸಂನ್ಯಾಸಿಯ ಸಹವಾಸ ಬೇಡ, ರಾಜಕುಮಾರರ ತಂಡದಲ್ಲಿಯೇ ಯಾರನ್ನಾದರೂ ಆಯ್ದುಕೊಂಡು ಮದುವೆಯಾಗಿ ಸುಖದಿಂದಿರು. ಈಗ ಕತ್ತಲಾಯಿತು. ಈ ರಾತ್ರಿಯನ್ನು ಈ ಮರದ ಬುಡದಲ್ಲಿಯೇ ಹೇಗೋ ಕಳೆಯೋಣ. ಬೆಳಕು ಹರಿದ ಬಳಿಕ ನೀನು ಪಟ್ಟಣವನ್ನು ಸೇರುವ ದಾರಿಯನ್ನು ತೋರಿಸಿಕೊಡುತ್ತೇವೆ. ದುಃಖಗಳು ಹೇಳಿಕೇಳಿ ಬರುತ್ತವೆಯೇ? ಅಳಬೇಡ, ಸಮಾಧಾನ ತಂದುಕೋ" ಎಂದು ಸಂತೈಸಿದರು.

ಅವರೆಲ್ಲರೂ ಕುಳಿತಿದ್ದ ತಾಣದ ಆ ಮರದ ಮೇಲೆ ಜೋಡಿ ಹಕ್ಕಿಗಳು ಗೂಡುಕಟ್ಟಿಕೊಂಡು ತಮ್ಮ ಮೂರು ಮರಿಗಳೊಡನೆ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದುವು. ಈ ಮೂವರನ್ನು ನೋಡಿದ ಗಂಡುಹಕ್ಕಿಯು ತನ್ನ ಹೆಂಡತಿಯನ್ನು ಕುರಿತು "ಯಾರೋ ಅತಿಥಿಗಳು ನಮ್ಮಲ್ಲಿಗೆ ಬಂದು ತಂಗಿದ್ದಾರೆ. ಛಳಿಯಿಂದ ನಡುಗುತ್ತಿದ್ದಾರೆ. ಅವರಿಗೆ ನಾವು ನಮ್ಮ ಕೈಲಾದ ಉಪಚಾರ ಮಾಡಬೇಕು" ಎಂದು ಹೇಳುತ್ತ ಎತ್ತಲೋ ಆ ಕತ್ತಲೆಯಲ್ಲಿಯೇ ಹಾರಿಹೋಯಿತು. ಸ್ವಲ್ಪ ಹೊತ್ತಿನ ತರುವಾಯ ಮರಳಿಬಂದಾಗ ಅದರ ಕೊಕ್ಕಿನಲ್ಲಿ ಉರಿಯುವ ಪುಳ್ಳೆಯೊಂದಿತ್ತು. ಅದನ್ನು ಗಂಡುಹಕ್ಕಿಯು ಅತಿಥಿಗಳು ಕುಳಿತಿದ್ದ ತಾಣದಲ್ಲಿ ಬೀಳಿಸಿತು. ಒಡನೆಯೇ ಸತ್ಯಾನಂದನು ಆ ಕೊಳ್ಳಿಯ ಸಹಾಯದಿಂದ, ಕಟ್ಟಿಗೆಯನ್ನೊಟ್ಟಿಕೊಂಡು, ಬೆಂಕಿ ಹೊತ್ತಿಸಿದನು. ಅದರ ಸುತ್ತ ಕುಳಿತು ಆ ಮೂವರೂ ತಮ್ಮ ಮೈಕೈಗಳನ್ನು ಕಾಯಿಸಿಕೊಳ್ಳತೊಡಗಿದರು. ಗಂಡುಹಕ್ಕಿಗೆ ಅಷ್ಟರಿಂದಲೇ ಸಮಾಧಾನವಾಗಲಿಲ್ಲ. "ಈ ಅತಿಥಿಗಳೆಲ್ಲ ಹಸಿದಿದ್ದಾರೆ. ಅವರಿಗೆ ಏನಾದರೂ ಆಹಾರವನ್ನು ದೊರಕಿಸಿಕೊಡುವುದು ನಮ್ಮ ಕರ್ತವ್ಯ. ನಾನು ಕೆಳಗೆ ಉರಿಯುತ್ತಿರುವ ಬೆಂಕಿಗೆ ಬಿದ್ದು ಅವರಿಗೆ ಆಹಾರವಾಗುತ್ತೇನೆ" ಎಂದು ಹೆಂಡತಿಗೆ ಹೇಳಿ ಆ ಬೆಂಕಿಯೊಳಕ್ಕೆ ಹಾರಿ, ತನ್ನನ್ನು ಸುಟ್ಟಮಾಂಸವಾಗಿ ಮಾಡಿಕೊಂಡುಬಿಟ್ಟಿತು.

ಅದರಿಂದ ಹೆಣ್ಣುಹಕ್ಕಿಗೆ ಸಂಕಟವಾಯಿತಾದರೂ ಹೇಗೋ ಸಹಿಸಿಕೊಂಡಿತು. "ಇಲ್ಲಿ ಮೂವರು ಅತಿಥಿಗಳಿದ್ದಾರೆ. ಒಂದು ಹಕ್ಕಿಯಿಂದ ಅವರ ಹೊಟ್ಟೆತುಂಬುವುದಿಲ್ಲ. ನನ್ನ ಪತಿಯ ಪ್ರಯತ್ನ ವ್ಯರ್ಥವಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ" ಎಂದು ಹೇಳಿಕೊಂಡು ತಾನೂ ಆ ಬೆಂಕಿಗೆ ಹಾರಿಕೊಂಡಿತು. ತಮ್ಮ ತಂದೆತಾಯಿಗಳು ಅತಿಥಿಸತ್ಕಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ದೃಶ್ಯವನ್ನು ಆ ಮೂರು ಪುಟ್ಟಮರಿಗಳೂ ನೋಡಿದವು. ಅವುಗಳಿಗೆ ದುಃಖವಾದರೂ ಹೇಗೋ ತಡೆದುಕೊಂಡವು. "ಇಲ್ಲಿ ಮೂವರು ಅತಿಥಿಗಳಿದ್ದಾರೆ. ಎರಡು ಹಕ್ಕಿಗಳಿಂದ ಅವರ ಹೊಟ್ಟೆತುಂಬುವುದಿಲ್ಲ. ನಾವೂ ಈ ಅತಿಥಿಗಳಿಗಾಗಿ ನಮ್ಮನ್ನು ಸಮರ್ಪಿಸಿಕೊಂಡು, ನಮ್ಮ ತಂದೆತಾಯಿಗಳ ಅಭಿಲಾಷೆಯು ಪರಿಪೂರ್ಣವಾಗುವಂತೆ ಮಾಡೋಣ" ಎಂದು ಮಾತಾಡಿಕೊಂಡು, ತಾವೂ ಆ ಉರಿಯೊಳಕ್ಕೆ ಬಿದ್ದು, ಮಾಂಸದ ಮುದ್ದೆಯಾಗಿಬಿಟ್ಟುವು.

ಪಕ್ಷಿಭಾಷೆಯನ್ನು ಅರಿತಿದ್ದ ಸತ್ಯಾನಂದನಿಗೆ ಆಗ ನಡೆದ ಘಟನೆಯ ಒಳಮರ್ಮವೆಲ್ಲವೂ ತಿಳಿದುಹೋಯಿತು. ಅದನ್ನೆಲ್ಲ ಅವನು ಚಂದ್ರವರ್ಮನಿಗೂ ರಾಜಕುಮಾರಿಗೂ ವಿವರಿಸಿ ಹೇಳಿದನು. ಪಕ್ಷಿಗಳು ಮಾಡಿದ ಬಲಿದಾನದಿಂದ ಎಲ್ಲರ ಹೃದಯವೂ ಕರಗಿಹೋಯಿತು. ಯಾರಿಗೂ ಅವುಗಳ ಮಾಂಸ

ವನ್ನು ತಿನ್ನುವುದು ಇಷ್ಟವಾಗಲಿಲ್ಲ. ಈ ಪಕ್ಷಿಗಳ ಮುಂದೆ ನಾವು ಎಷ್ಟರವರು ಎಂಬ ಭಾವನೆಯಲ್ಲಿಯೇ ಅವರು ಉಪವಾಸ – ವನವಾಸದಲ್ಲಿಯೇ ಆ ರಾತ್ರಿಯನ್ನು ಕಳೆದರು. ಅರುಣೋದಯ ವಾಗುತ್ತಿದ್ದಂತೆಯೇ ಎಲ್ಲರೂ ಎದ್ದು, ಸಮೀಪದಲ್ಲಿಯೇ ಇದ್ದ ತೊರೆಯಲ್ಲಿ ಮುಖಮಾರ್ಜನ ಮಾಡಿಕೊಂಡು ಕುಳಿತರು. ಸತ್ಯಾನಂದನು ತಾವು ಇಲ್ಲಿಯವರೆಗೆ ಬಂದ ಕಥೆಯನ್ನೆಲ್ಲ ಇಂದುಮತಿಗೆ ವಿವರಿಸಿ ಹೇಳಿದನು. ಆಮೇಲೆ ಚಂದ್ರವರ್ಮನನ್ನು ಕುರಿತು, "ಮಹಾರಾಜ, ಸಂನ್ಯಾಸಿಯು ಶ್ರೇಷ್ಠನೋ ಗೃಹಸ್ಥನು ಶ್ರೇಷ್ಠನೋ ಎಂಬ ನಿನ್ನ ಪ್ರಶ್ನೆಗೆ ಅವರವರ ಸ್ಥಾನಮಾನಗಳಲ್ಲಿ ಅವರವರು ದೊಡ್ಡವರು, ಹೆಚ್ಚುಕಡಿಮೆಯೆಂಬ ತಾರತಮ್ಯವೇನೂ ಇಲ್ಲ ಎಂದು ಹೇಳಿದ್ದೆನಲ್ಲವೇ, ಅದನ್ನೀಗ ನಾನು ಪ್ರಮಾಣ ಪೂರ್ವಕವಾಗಿ ನಿನಗೆ ತೋರಿಸಿಕೊಟ್ಟಿದ್ದೇನೆ" ಎಂದನು. ಆಗ ದೊರೆಯು, "ನನಗೆ ಅದನ್ನು ಸ್ವಲ್ಪ ವಿವರಿಸಿ ಹೇಳಿ" ಎಂದು ಪ್ರಾರ್ಥಿಸಿದನು. ಅದಕ್ಕೆ ಸತ್ಯಾನಂದನು, "ಶ್ರೇಷ್ಠನಾದ ಗೃಹಸ್ಥ ನಾಗಿರಬೇಕೆಂದಾದರೆ ಆ ಹಕ್ಕಿಗಳಂತೆ ಪರಹಿತಕ್ಕಾಗಿ ಯಾವ ಕ್ಷಣದಲ್ಲಾದರೂ ಪ್ರಾಣಸಮರ್ಪಣೆಯೂ ಸೇರಿದಂತೆ, ಯಾವುದೇ ತ್ಯಾಗಕ್ಕಾದರೂ ಸಿದ್ಧವಾಗಿರಬೇಕು. ಶ್ರೇಷ್ಠನಾದ ಸಂನ್ಯಾಸಿ ಯಾಗಿರಬೇಕೆಂದಾದರೆ ಈ ಅರಣ್ಯಮಾರ್ಗದಲ್ಲಿ ಮರೆಯಾಗಿ ಹೋದ ಯುವಸಂನ್ಯಾಸಿಯಂತಿರಬೇಕು. ಅವನು ಕಾಶ್ಮೀರದ ಸಿಂಹಾಸನವನ್ನಾಗಲಿ, ಅಲ್ಲಿನ ಧನಕನಕವಸ್ತುವಾಹನಗಳನ್ನಾಗಲಿ, ಇಂತಹ ಪರಮಸುಂದರಿಯಾದ ರಾಜಕುಮಾರಿಯನ್ನಾಗಲಿ ಕಣ್ಣೆತ್ತಿಯೂ ನೋಡದೆ, ಹುಲ್ಲುಕಡ್ಡಿಗಿಂತ ಕಡೆಯಾಗಿ ಭಾವಿಸಿ ಎತ್ತಲೋ ಮರೆಯಾಗಿಬಿಟ್ಟನು. ಸಂನ್ಯಾಸಿಗೆ ಅಂತಹ ಪರಿಪೂರ್ಣ ವಾದ ತ್ಯಾಗಧರ್ಮವಿರಬೇಕು. ತ್ಯಾಗದಿಂದಲ್ಲದೆ ಅಮೃತತ್ತ್ವವು ಸಿದ್ಧಿಸುವುದಿಲ್ಲ. ಗೃಹಸ್ಥರಾಗಲಿ, ಸಂನ್ಯಾಸಿಗಳಾಗಲಿ ತಂತಮ್ಮ ಸ್ಥಾನಗಳಲ್ಲಿ ಅವರು ದೊಡ್ಡವರೇ ಆಗಿರುತ್ತಾರೆ. ಒಬ್ಬರ ಕರ್ತವ್ಯ ಮತ್ತೊಬ್ಬರಿಗಿಲ್ಲ ಎಂಬುದನ್ನು ಮನವರಿಕೆ ಮಾಡಿಕೋ. ಗೃಹಸ್ಥ ಧರ್ಮಕ್ಕೆ ಈ ಪಕ್ಷಿಗಳೂ ಸಂನ್ಯಾಸಧರ್ಮಕ್ಕೆ ಆ ಯುವ ಸಂನ್ಯಾಸಿಯೂ ನಿನಗೆ ಆದರ್ಶವಾಗಲಿ" ಎಂದು ವಿವರಿಸಿ ಹೇಳಿದನು.

ಗೊಂಡಾರಣ್ಯದಿಂದ ಹೊರಬಂದ ಬಳಿಕ ಸತ್ಯಾನಂದನು ರಾಜಕುಮಾರಿಗೆ ನಗರವನ್ನು ತಲಪುವ ದಾರಿಯನ್ನು ತೋರಿಸಿ ಕೊಟ್ಟನು. "ನಿಮ್ಮ ಸತ್ಸಂಗದಿಂದ ನಾನು ಬದುಕಿನ ಶ್ರೇಷ್ಠಪಾಠ ವೊಂದನ್ನು ಕಲಿತೆ. ನನ್ನ ಮನಸ್ಸಿನ ದುಃಖತಳಮಳಗಳು ದೂರ ವಾದವು" ಎಂದು ಇಂದುಮತಿಯು ಸತ್ಯಾನಂದನಿಗೂ ಚಂದ್ರ ವರ್ಮನಿಗೂ ನಮಸ್ಕರಿಸಿ ಪಟ್ಟಣದ ಹಾದಿಯನ್ನು ಹಿಡಿದಳು. ಆಮೇಲೆ ಚಂದ್ರವರ್ಮನು, "ನಿಮ್ಮ ಕೃಪೆಯಿಂದಾಗಿ ಬಹುದಿನ ಗಳಿಂದ ಕಾಡುತ್ತಿದ್ದ ಪ್ರಶ್ನೆಯೊಂದಕ್ಕೆ ಸೂಕ್ತವಾದ ಸಮಾಧಾನವನ್ನು ಕಂಡುಕೊಂಡಂತಾಯಿತು. ಪ್ರತಿಯೊಬ್ಬರೂ ತಾವು ಮಾಡುವ ಕರ್ತವ್ಯಗಳ ಬಲದಿಂದ ದೊಡ್ಡವರೆನಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಂಡಿದ್ದೇನೆ" ಎಂದು ಹೇಳುತ್ತ ಸತ್ಯಾನಂದನಿಗೆ ನಮಸ್ಕರಿಸಿ ತನ್ನ ಗಾಂಧಾರದೇಶದ ಹಾದಿಯತ್ತ ಹೆಜ್ಜೆಹಾಕಿದನು. ಎಲ್ಲಿದ್ದರೇನು, ಎತ್ತಹೋದರೇನು ಎಂಬ ನಿರ್ಲಿಪ್ತಭಾವದಿಂದ ಸತ್ಯಾನಂದನು ಎತ್ತಲೋ ಕಣ್ಮರೆಯಾಗಿಬಿಟ್ಟನು.

ಸಿಂಹಾಸನಾರೂಢನಾದ ರಾಜನೆಷ್ಟು ದೊಡ್ಡವನೊ, ಅಷ್ಟೇ ದೊಡ್ಡವನು ಬೀದಿಗುಡಿಸುವವನು ಕೂಡ. ಪ್ರಪಂಚವನ್ನು ಬಿಟ್ಟ ಸಂನ್ಯಾಸಿಯು ಪ್ರಪಂಚದೊಳಗಿರುವ ಗೃಹಸ್ಥನಿಗಿಂತ ದೊಡ್ಡವ ನೆಂದು ಹೇಳುವುದು ನಿರರ್ಥಕ. ಪ್ರಪಂಚದಲ್ಲಿದ್ದು ಈಶ್ವರಭಜನೆ ಮಾಡುವುದು, ಪ್ರಪಂಚವನ್ನು ಬಿಟ್ಟು ಮನಬಂದಂತೆ ಸುಲಭ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕಿಂತಲೂ ಕಠಿಣತರ ವಾದುದು. ತಮ್ಮ ಹೆಂಡತಿಮಕ್ಕಳಿಗಾಗಿ ಪ್ರಪಂಚದಲ್ಲಿರುವವರು, ಪ್ರಪಂಚವನ್ನು ತ್ಯಾಗಮಾಡಿದ ಸಂನ್ಯಾಸಿಗಳನ್ನು, "ಅವರು ಕೆಲಸಕ್ಕೆ ಬಾರದ ಖಾಲಿಪೋಲಿಗಳು" ಎಂದು ಎಣಿಸಬಾರದು. ಈ ಪ್ರಪಂಚದ ಅನಾದರ, ಅಪಹಾಸ್ಯಗಳನ್ನು ಮನಸ್ಸಿಗೆ ಹಾಕಿಕೊಳ್ಳದೆ ಎಲ್ಲರೂ ತಮ್ಮ ಪಾಲಿನ ಕರ್ತವ್ಯಗಳನ್ನು ಮಾಡುತ್ತಲೇ ಇರಬೇಕು.



## ಸ್ವಾಮಿ ವಿವೇಕಾನಂದ ಗುರುವರ

ಸ್ವಾಮಿ ವಿವೇಕಾನಂದ ಗುರುವರ ಚಿತ್ಸೂರ್ಯ–
ನಂದದಿ ಉದಿಸಿ ಬೆಳಗುತಿರು ನಮ್ಮ ಜೀವನವ;
ಮನದ ದಿಗಂತದ ತಿಮಿರ ಸರಿ ಸರಿದು ಹೋಗಲಿ
ವಿವೇಕ ಹೊಂಗಿರಣಕೆ ನಮ್ಮ ಬಾಳು ಬೆಳಗಲಿ.

ಬಿತ್ತು ನಿನ್ನಯ ಅಂದಿನ ದೇಶಭಕ್ತಿ ಕಿರಣ
ನಿನ್ನ ಕರೆ ಮೊಳಗುತಿರಲಿ ನಮ್ಮ ಕರ್ಣ, ಹರಣ
ಪಾಚಿಗಟ್ಟಿದ ರೂಢಿಜಾಡ್ಯ ಕರಗಿಹೋಗಲಿ
ಸ್ವಾರ್ಥಪಾಶ ಬಿಗಿಯದಿರಲಿ ನಮ್ಮ ಮೈ ಕೈಗೆ.

ನಿನ್ನ ಗುರುವಾಣಿ ಎಚ್ಚರಿಸಲಿ ನಿದ್ದೆ ಹರಿದು
ಒಂದುಗೂಡಿಸಲಿ ವಿಶ್ವಮಾನವರನು ಕರೆದು
ಜಾತಿಮದದ ಆನೆ ಓಡಲಿ ಅರಿವು ಮೂಡಲಿ,
ವಿಶ್ವ ಜೀವನಕೆ ನಮ್ಮೆದೆ ವಿಸ್ತಾರಗೊಳ್ಳಲಿ!

ವಿಶ್ವಮಾನವ ಪ್ರೀತಿಕಿರಣ ಚಾಚಿ ಬರಲಿ
ಮನುಜರೆದೆಯಲಿ ದೇವ ಬೆಳಗದು ತುಂಬುತಿರಲಿ

*– ಎಂ. ಜಿ. ಗಂಗನಪಳ್ಳಿ, ಬೀದರ್*

# ಸ್ವಾಮಿ ವಿವೇಕಾನಂದರ ಮಾನವೀಯ ಮುಖ

ಜಿ.ಎಸ್. ಜಯದೇವ



## ವಿವೇಕಕಿರಣ

ಸಿಂಹಸದೃಶವಾದ ವ್ಯಕ್ತಿತ್ವ, ಸದಾ 'ಅಭೀಃ ಅಭೀಃ' ಎಂಬ ಉದ್ಘೋಷ, ಎಂತಹ ವಿಷಮ ಸನ್ನಿವೇಶದಲ್ಲೂ ಸೆಟೆದು ನಿಲ್ಲುವ ಎದೆಗಾರಿಕೆ – ಇದು ನಾವು ಕಲ್ಪಿಸಿಕೊಳ್ಳುವ ಸ್ವಾಮಿ ವಿವೇಕಾನಂದರ ಚಿತ್ರಣ. ದೌರ್ಬಲ್ಯಗಳಿಗೆ, ಕ್ಷುದ್ರತೆಗಳಿಗೆ ಎಡೆಯೇ ಇಲ್ಲದ ಈ ಧೀಮಂತ ವ್ಯಕ್ತಿಯ ಹೃದಯ ಬೆಣ್ಣೆಯಷ್ಟು ಮೃದುವಾಗಿತ್ತು ಎನ್ನುವುದೂ ಅಷ್ಟೇ ಸತ್ಯ. ದುಃಖಭೂಯಿಷ್ಠವಾದ ಈ ಜಗದ ನೋವಿಗೆ ಸ್ವಾಮೀಜಿ ಮಗುವಿನಂತೆ ಅತ್ತು ಬಿಡುತ್ತಿದ್ದರು. **'ಮರುಗುವವನು ಮಹಾತ್ಮ, ಮರುಗದವನು ದುರಾತ್ಮ'** ಎಂಬ ಮಾತಿನ ಅರ್ಥಕ್ಕೆ ಸ್ವಾಮೀಜಿಯವರ ಜೀವನ ಒಂದು ಜೀವಂತ ಭಾಷ್ಯವಾಗಿತ್ತು.

ಒಮ್ಮೆ ಸ್ವಾಮಿ ತುರೀಯಾನಂದರು (ಹರಿ ಮಹಾರಾಜ್) ಮತ್ತು ಸ್ವಾಮಿ ಬ್ರಹ್ಮಾನಂದರು (ರಾಖಾಲ್ ಮಹಾರಾಜ್) ದೇಶಸಂಚಾರ ಮಾಡುತ್ತಿದ್ದಾಗ ಅಬುಸ್ಟೇಷನ್ ರೋಡ್ ಎಂಬ ಸ್ಥಳದಲ್ಲಿ ಸ್ವಾಮಿ ವಿವೇಕಾನಂದರನ್ನು ಅಕಸ್ಮಾತ್ ಭೇಟಿಯಾಗುತ್ತಾರೆ. ಆಗ ಸ್ವಾಮೀಜಿಯವರು ಒಂದು ಉತ್ಕಟ ಭಾವದಲ್ಲಿದ್ದರು ಎಂದು ಕಾಣುತ್ತದೆ. ಸೋದರ ಸಂನ್ಯಾಸಿ ಹರಿ ಮಹಾರಾಜರನ್ನು ಕಂಡಕೂಡಲೇ ಸ್ವಾಮೀಜಿ ಹೀಗೆ ಹೇಳುತ್ತಾರೆ:

"ಹರಿ ಭಾಯಿ, ನೀನು ಧರ್ಮ ಎಂದು ಏನು ಹೇಳುತ್ತೀಯೋ, ಅದು ನನಗೆ ಇನ್ನೂ ಅರ್ಥವಾಗುತ್ತಿಲ್ಲ." ಹೀಗೆ ಹೇಳುತ್ತಿದ್ದಂತೆಯೇ ಅತ್ಯಂತ ಭಾವುಕರಾಗಿದ್ದ ಸ್ವಾಮೀಜಿಯವರಿಗೆ ಮಾತನಾಡಲೂ ಆಗಲಿಲ್ಲ; ಸ್ವಲ್ಪ ಚೇತರಿಸಿಕೊಂಡು ಮತ್ತೆ ಹೇಳಿದರಂತೆ: "ಆದರೆ ನನ್ನ ಹೃದಯ ಅಳತೆ ಮೀರಿ ಹಿಗ್ಗುತ್ತಿದೆ, ಇತರರ ನೋವು ನನಗೆ ನೇರವಾಗಿ ಅನುಭವಕ್ಕೆ ಬರುತ್ತಿದೆ. ನನ್ನನ್ನು ನಂಬು, ಇತರರು ನೋವನ್ನು ಅನುಭವಿಸುವುದನ್ನು ಕಂಡಕೂಡಲೇ ನಾನೂ ಅದೇ ನೋವಿಗೆ ಒಳಗಾಗುತ್ತೇನೆ." ಹೀಗೆ ಹೇಳುತ್ತ ಹೇಳುತ್ತ, ಸ್ವಾಮೀಜಿಯವರ ಕಣ್ಣುಗಳಿಂದ ಕಣ್ಣೀರಿನ ಕೋಡಿ ಹರಿಯಿತು.

ಇತರರ ನೋವು ನಮ್ಮ ಅಂತರಂಗವನ್ನು ಪ್ರವೇಶಿಸಿ ತತ್ಸಮಾನವಾದ ಸ್ಪಂದನಗಳನ್ನು ನಮ್ಮಲ್ಲಿ ಉಂಟುಮಾಡುವುದನ್ನು ನಾವು ನಮ್ಮ ನಿತ್ಯಜೀವನದಲ್ಲಿ ಸಹಜವಾಗಿ ಗಮನಿಸುತ್ತೇವೆ. ನಮ್ಮ ನೆರೆಹೊರೆಯವರು ದುಃಖಕ್ಕೆ, ಕಷ್ಟಕ್ಕೆ ಒಳಗಾದರೆ ನಾವು ತಕ್ಷಣ ಸಹಾಯ ಮಾಡಲು ಮುಂದಾಗುತ್ತೇವೆ. ಮನುಷ್ಯರಿಗಷ್ಟೇ ಏಕೆ, ಪ್ರಾಣಿಪಕ್ಷಿಗಳಿಗೆ ನೋವಾದರೂ ಸಹ, ಆ ನೋವನ್ನು ಪರಿಹರಿಸಲು ನಾವು ಪ್ರಯತ್ನಿಸುತ್ತೇವೆ; ಈ ಸಂಬಂಧವಾಗಿ ನಮಗೆ ಸ್ವಲ್ಪ ಕಷ್ಟವಾದರೂ ನೋವು ನಿವಾರಣೆಗೆ ಮುಂದಾಗುತ್ತೇವೆ. ಮನುಷ್ಯನ ಈ ಸಾತ್ವಿಕ ಪ್ರವೃತ್ತಿಯೇ ಧರ್ಮದ ಮೂಲ. "ನೋವು ಇರುವವರೆಗೆ ಧರ್ಮ ಇರುತ್ತದೆ" ಎಂಬ ದಲಾಯಿ ಲಾಮಾ ಅವರ ಮಾತನ್ನಾಗಲಿ ಅಥವಾ 'ದಯೆಯೇ ಧರ್ಮದ ಮೂಲವಯ್ಯ' ಎಂಬ ಬಸವಣ್ಣನವರ ಮಾತನ್ನಾಗಲಿ ಈ ಸಂದರ್ಭದಲ್ಲಿ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಮತ್ತೊಂದು ಜೀವಿಯ ನೋವನ್ನು ಸ್ವಾಮಿ ವಿವೇಕಾನಂದರು ತಮ್ಮ ದೇಹದಲ್ಲಿ ಯಥಾವತ್ತಾಗಿ ಅನುಭವಿಸುತ್ತಿದ್ದುದು ಒಂದು ವಿಶೇಷ. ಕೆಲವೊಮ್ಮೆ, ನೋವು ಅನುಭವಿಸುತ್ತಿರುವ ಒಬ್ಬ ವ್ಯಕ್ತಿಯನ್ನು ನೋಡಿದ ಕೂಡಲೇ ಅವರು ಉತ್ಕಟ ಭಾವಾವಸ್ಥೆಗೆ ಏರಿ ಬಿಡುತ್ತಿದ್ದರು ಮತ್ತು ಇತರರ ನೋವು ಅವರ ಶರೀರದಲ್ಲಿ ಸ್ಪಷ್ಟವಾಗಿಯೇ ವ್ಯಕ್ತವಾಗುತ್ತಿತ್ತು. ದಾರ್ಜಿಲಿಂಗ್‌ನಲ್ಲಿ ನಡೆದ ಒಂದು ಘಟನೆ ಇದಕ್ಕೆ ಸಾಕ್ಷಿಯಾಗಿದೆ. ಪಾಶ್ಚಾತ್ಯ ದೇಶಗಳಿಂದ ಹಿಂತಿರುಗಿದ ನಂತರ ಸ್ವಾಮೀಜಿಯವರ ಆರೋಗ್ಯ ಕೆಟ್ಟಿತು. ಹವಾ ಬದಲಾವಣೆಗಾಗಿ ದಾರ್ಜಿಲಿಂಗ್‌ಗೆ ಬಂದರು. ಅಲ್ಲಿ ಒಂದು ದಿನ ಬೆಳಿಗ್ಗೆ ವಾಯುವಿಹಾರಕ್ಕೆಂದು ನಡೆದು ಬರುತ್ತಿದ್ದಾಗ, ಸ್ಥಳೀಯ ಬುಡಕಟ್ಟಿನ ಮಹಿಳೆಯೊಬ್ಬಳು ದೊಡ್ಡದೊಂದು ಸೌದೆ ಹೊರೆಯನ್ನು ಹೊರಲಾರದೆ ಹೊತ್ತು ನಡೆಯುತ್ತಿದ್ದಳು. ಆಕೆಯನ್ನು ಕಂಡ ಕೂಡಲೇ ಸ್ವಾಮೀಜಿ ಆಕೆ ಅನುಭವಿಸುತ್ತಿದ್ದ ನೋವನ್ನು, ಆಕೆ ಅನುಭವಿಸುತ್ತಿದ್ದಷ್ಟೇ ತೀಕ್ಷ್ಣವಾಗಿ ಅನುಭವಿಸತೊಡಗಿದರು. ಕೆಲವೇ ಕ್ಷಣಗಳಲ್ಲಿ ಆಕೆ ಭಾರ ತಡೆಯಲಾರದೆ ಹೊರೆಯ ಸಮೇತ ಬಿದ್ದುಬಿಟ್ಟಳು; ಆಕೆಯ ಪಕ್ಕೆಲುಬು ಮುರಿದು